Price : Rs. 2=00 Date of publication 15th of every month Date of posting 20th of every month

# ನವಿ ಮುಂಬಯಿ ಕನ್ನಡ ಸಂಕಲನ

ಸಂಪುಟ ೧೮ ಸಂಚಿಕೆ ೦೭ ಜುಲೈ ೨೦೧೬

ನವಿ ಮುಂಬಯಿ
ಕನ್ನಡ ಸಂಘದ ಮುಖಪತ್ರ

**ಸಂಪಾದಕ ಮಂಡಳಿ**
ಶ್ರೀ ಬಿ.ಎಚ್. ಕಟ್ಟಿ
ಶ್ರೀ ಶ್ರೀಧರ್ ಮೈಸೂರ
ಶ್ರೀ ಪ್ರಭಾಕರ ಎಸ್. ದೇವಾಡಿಗ

**ಕಾರ್ಯ ನಿರ್ವಾಹಕರು**
**ಗೌರವಾಧ್ಯಕ್ಷರು**
ಶ್ರೀ ಬಿ.ಬಾಲಚಂದ್ರರಾವ್

**ಅಧ್ಯಕ್ಷರು**
ಶ್ರೀ ಬಿ. ಎಚ್. ಕಟ್ಟಿ

**ಉಪಾಧ್ಯಕ್ಷರು**
ಶ್ರೀ ಗೋಪಾಲ್ ವೈ. ಶೆಟ್ಟಿ
ಶ್ರೀ ಬಿ. ಎನ್. ಎಲ್.ಮೂರ್ತಿ
ಶ್ರೀಮತಿ ಸವಿತಾ ಎಚ್ ನಾಯಕ್
ಶ್ರೀ ವೈ. ಕೆ. ರಾವ್

**ಕಾರ್ಯದರ್ಶಿ**
ಶ್ರೀಮತಿ ಸುಜಾತಾ ರಾವ್

**ಜೊತೆ ಕಾರ್ಯದರ್ಶಿ**
ಶ್ರೀಮತಿ ವಾಸಂತಿ ಕರ್ಕೇರ

**ಕೋಶಾಧಿಕಾರಿ**
ಶ್ರೀ ಜಯಾ ಶೆಟ್ಟಿ

**ಪ್ರಕಾಶಕರು**
ನವಿ ಮುಂಬಯಿ ಕನ್ನಡ ಸಂಘ
ಪ್ಲಾಟ್ ನಂ.೨ ಸಿ / ೨
ಸೆಕ್ಟರ್ ನಂ. ೯ ಎ, ವಾಶಿ.
ನವಿ ಮುಂಬಯಿ - ೪೦೦೭೦೩.
ದೂರವಾಣಿ : ೨೭೮೫೩೪೪೩

## ಓರ್ಲ್ಯಾಂಡೋ ಹತ್ಯಾಕಾಂಡ

ಜೂನ್ ೧೨ ಒಬ್ಬ ಬಂದೂಕುಧಾರಿ ಅಮೇರಿಕೆಯ ಓರ್ಲ್ಯಾಂಡೋದ ಒಂದು ಸಲಿಂಗಿ ಕ್ಲಬ್ಬಿನಲ್ಲಿ ನುಗ್ಗಿ ೪೯ ಜನರನ್ನು ಗುಂಡಿಕ್ಕಿ ಕೊಲ್ಲುತ್ತಾನೆ. ಕಾರಣ ಅವರೆಲ್ಲ ಸಲಿಂಗಿಗಳು (LGBT) ಮತ್ತು ತಾನು ಇಸ್ಲಾಮಿಕ್ ಸ್ಟೇಟ್ (IS) ಪರವಾಗಿ ಈ ಕೃತ್ಯವೆಸಗಿದೆ ಎಂದು ಹೇಳುತ್ತಾನೆ. ಕಾರಣ ಏನೇ ಇರಲಿ ಹತ್ಯಾಕಾಂಡವಾದದ್ದಂತೂ ನಿಜ ಮತ್ತು ೪೯ ನಿರ್ದೋಷಿ ಪ್ರಜೆಗಳು ಅಸುನೀಗಿದರು. ಅಮೇರಿಕೆಯಲ್ಲಿ ಈ ಪ್ರಕಾರದ ಹತ್ಯಾಕಾಂಡಗಳೇನು ಹೊಸದಲ್ಲ. ಅಮೇರಿಕೆಯಲ್ಲಷ್ಟೇ ಏಕೆ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಈ ತರಹದ ಹತ್ಯಾಕಾಂಡಗಳು ಕಳೆದ ಅನೇಕ ದಶಮಾನಗಳಲ್ಲಿ ನಡೆಯುತ್ತ ಬಂದಿದೆ. ಹತ್ಯಾಕಾಂಡದಲ್ಲಿ ಅಸುನೀಗಿದವರ ಸಂಖ್ಯೆ ಬೇರೆ ಇರಬಹುದು. ಒಂದು, ಎರಡು ಅಥವಾ ಅನೇಕ ಮತ್ತು ಹತ್ಯಾಕಾಂಡದ ಕಾರಣಗಳು ಸಹ ಬೇರೆ ಬೇರೆ ಉದ್ದೇಶಗಳು. ಭಿನ್ನ ಭಿನ್ನ ಜಾತೀಯತೆ ಇರಬಹುದು, ಉಗ್ರವಾದಿಗಳಿರಬಹುದು, ಸಾಂಪ್ರದಾಯಿಕತೆಯ ನೆವ ಇರಬಹುದು. ಇತ್ಯಾದಿ

ಅಮೇರಿಕೆಯಲ್ಲಿಯೇ ಕಳೆದ ನಲವತ್ತು ವರ್ಷಗಳಲ್ಲಿ ಪ್ರತಿ ವರ್ಷ ಅನೇಕ ಹತ್ಯಾಕಾಂಡಗಳಾಗಿವೆ. ನೂರಾರು ಜನರು ಅಸು ನೀಗಿದ್ದಾರೆ. ಅಮೇರಿಕೆಯಲ್ಲಷ್ಟೇ ಏಕೆ ನಮ್ಮ ಭಾರತದಲ್ಲಿಯೂ ಕಡಿಮೆ ಹತ್ಯಾಕಾಂಡಗಳಾಗಿವೆಯೇ? ಕಳೆದ ೨೫-೩೦ ವರ್ಷಗಳಿಂದ ಪ್ರತಿ ವರ್ಷ ನಾವು ನೋಡುತ್ತಿದ್ದೇವೆ. ಒಂದಲ್ಲ ಒಂದು ಪ್ರದೇಶದಲ್ಲಿ ಏನೇನೋ ಕಾರಣದಿಂದ ಮಾರಣಹೋಮಗಳಾಗುತ್ತಿವೆ. ನಮ್ಮ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಬಾಂಗ್ಲಾದೇಶ, ಅಫ್‌ಘಾನಿಸ್ತಾನಗಳಲ್ಲಿ ಸಹ ಇದೇ ದುರ್ಗತಿ. ಅರಬ್ ದೇಶಗಳಲ್ಲಿಯೂ ಪ್ರತಿ ದಿನದ ಕತೆಯಾಗಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಹ ನಾವು ನೋಡುತ್ತಿದ್ದೇವೆ. ಮೇಲಿಂದ ಮೇಲೆ ಈ ಘಟನೆಗಳು.

ಹತ್ಯಾಕಾಂಡದ ರೀತಿಗಳು ವಿಭಿನ್ನ. ಬಂದೂಕುಧಾರಿಗಳಾಗಿರಬಹುದು, ಕೈಬಾಂಬುಗಳಾಗಿರಬಹುದು, ಉಗ್ರವಾದಿಗಳಾಗಿರಬಹುದು, ಆತ್ಮ ಹತ್ಯಾ ಬಾಂಬರುಗಳಿರಬಹುದು, ವಿಮಾನಗಳಲ್ಲಿ, ರೈಲುಗಾಡಿಗಳಲ್ಲಿ ಸ್ಫೋಟಕಗಳನ್ನಿಟ್ಟು ಆಗಬಹುದು. ಇನ್ನೂ ಏನೇನೋ ಪ್ರಕಾರಗಳು ಆಗಿರಬಹುದು. ಆದರೆ ಉದ್ದೇಶ ಹತ್ಯಾಕಾಂಡ.

ಈ ಹತ್ಯಾಕಾಂಡಗಳಿಗೆ ಕಾರಣವೇನು - ಸೂತ್ರಧಾರರು ಯಾರು ಎಂಬ ಬಗ್ಗೆ ಬಹುತೇಕ ನಾವು ನೋಡುತ್ತೇವೆ. ಅಪರಾಧಿಗಳಲ್ಲಿ ಯುವಕರು, ಶಿಕ್ಷಿತರು ಮತ್ತು ತಂತ್ರಜ್ಞಾನಿಗಳೂ ಸಹ ಇದ್ದಾರೆ. ಇಂತಹದೇ ಜಾತಿಯವರು ಎಂದು ಸಹ ಹೇಳಲಾಗದು. ಎಲ್ಲ ಜಾತಿ ಜಮಾತಿಗಳ ಜನರೂ ಒಂದಿಲ್ಲ ಒಂದು ಹತ್ಯಾಕಾಂಡದಲ್ಲಿ ಭಾಗಿಗಳು. ಕಾರಣ ಅಸಹಿಷ್ಣುತೆಯೋ, ನಿರುದ್ಯೋಗವೋ, ಅಂಧಶ್ರದ್ಧೆಯೋ, ಜಾತಿಯ ವಾದಿಗಳ-ಉಗ್ರವಾದಿಗಳ ಪ್ರೋತ್ಸಾಹವೇ ಅಪನಂಬಿಕೆಯೋ ಅಥವಾ ಹಣದಾಸೆಯೇ? ಇಲ್ಲಿ ಯೋಚಿಸಬೇಕಾದ ಮತ್ತೊಂದು ಮುಖ್ಯ ವಿಷಯವೆಂದರೇ ಈ ಎಲ್ಲರಿಗೆ ಧನಸಹಾಯ ಎಲ್ಲಿಂದ ಮತ್ತು ಯಾಕೆ? ಇದೊಂದು ನಿಗೂಢ ಪ್ರಶ್ನೆ.

ಈ ಹತ್ಯಾಕಾಂಡಗಳ ಅಪರಾಧಿಗಳನ್ನು ಕಂಡು ಹಿಡಿದು ಶಿಕ್ಷಿಸುವುದು. ಅತಿ ಮುಖ್ಯವಾದ ಸಮಸ್ಯೆ ಅವರನ್ನು ಬಂಧಿಸಿ ಶಿಕ್ಷೆಗೆ ಒಳ ಮಾಡಲು ಎಲ್ಲ ಸರಕಾರಗಳೂ ಪ್ರಯತ್ನಶೀಲವಾಗಿರುತ್ತವೆ - ಆಗಿರಬೇಕು. ಆದರೆ ಕೆಲವು ರಾಷ್ಟ್ರಗಳ ಹೊರತಾಗಿ ಇತರ ರಾಷ್ಟ್ರಗಳಲ್ಲಿ ಅದಕ್ಕೆ ಪ್ರಾಧಾನ್ಯತೆ ಕಡಿಮೆ. ಅಪರಾಧಿಗಳನ್ನು ಕಂಡು ಹಿಡಿದು ಬಂಧಿಸಲು ಅನೇಕ ವರ್ಷ ಮತ್ತು ಮೊಕದ್ದಮೆಯನ್ನು ಪ್ರಾರಂಭಿಸಿ ಕೊನೆಗೊಳಿಸಿ ಅವರನ್ನು ಶಿಕ್ಷಿಸಲು ಮತ್ತಷ್ಟು ವರ್ಷಗಳು ಬೇಕಾಗುತ್ತದೆ. ನಾವು ನಮ್ಮ ರಾಷ್ಟ್ರದಲ್ಲಿಯೇ ನೋಡುತ್ತೇವೆ - ಹತ್ತು, ಹದಿನೈದು ವರ್ಷಗಳಾದರೂ ಮೊಕದ್ದಮೆಯ ತೀರ್ಪು ಬರುವುದಿಲ್ಲ. ಅಪರಾಧಿಗಳು ಸೆರೆಮನೆಯಲ್ಲಿಯೋ ಅಥವಾ ಜಾಮೀನ್(ಬೇಲ್) ಮೇಲೆಯೋ ಇರುತ್ತಾರೆ.

ಇಲ್ಲಿ ಇನ್ನೊಂದು ಗಮನಿಸಬೇಕಾದ ವಿಷಯವೇನೆಂದರೆ ಈ ಹತ್ಯಾಕಾಂಡಗಳಿಗೆ ರಾಜಕೀಯ ಬಣ್ಣ ಬರುತ್ತದೆ. ಚುನಾವಣೆ ಹತ್ತಿರವಿದ್ದರಂತೂ ಇನ್ನೂ ಬಣ್ಣವೇರುತ್ತದೆ. ನಮ್ಮ ರಾಷ್ಟ್ರದಲ್ಲಷ್ಟೇ ಏಕೆ ಈಗ ನಾವು ಅಮೇರಿಕೆಯಲ್ಲಿ ಸಹ ನೋಡುತ್ತೇವೆ. ಈ ಓರ್ಲ್ಯಾಂಡೋ ಪ್ರಕರಣದ ಪರಿಣಾಮ ಜಾತಿಯತೆಯ ಮೇಲಿಂದ ಪ್ರವೇಶ ಮತ್ತು ಬಂದೂಕಿನ ಪರವಾನಗಿಗಳು (Gun License) ಮುಖ್ಯವಾಗಿ ಚರ್ಚಿಸಲ್ಪಡುತ್ತವೆ ಎರಡೂ ಪಕ್ಷಗಳಲ್ಲಿ ವಾದವಿವಾದ ನಡೆಯುತ್ತದೆ. ನಮ್ಮ ರಾಷ್ಟ್ರದಲ್ಲಂತೂ ಪ್ರತಿಯೊಂದು ಹತ್ಯಾಕಾಂಡ ರಾಜಕೀಯದುಂತಾಗುತ್ತದೆ. ಅದು ಗೋಮಾಂಸವಾಗಲಿ, ಅಂತರಜಾತಿಯ ವಿವಾಹವಿರಲಿ, ಮಂದಿರ, ಮಸೀದಿಗಳಂತೂ ಇದ್ದೇ ಇವೆ. ಮತಾಂತರವಿರಲಿ ಅಥವಾ ಮೂಢನಂಬಿಕೆಯ ಹಿನ್ನೆಲೆ ಇರಲಿ ನಮ್ಮ ಎಲ್ಲ ಸ್ಥಾನೀಯ, ರಾಷ್ಟ್ರೀಯ ರಾಜಕೀಯ ಪಕ್ಷಗಳು ಅದನ್ನೇ ಒಂದು ಉದ್ದೇಶ ಮಾಡಿಕೊಂಡು ತಮ್ಮ ತಮ್ಮಲ್ಲಿ ಭಿನ್ನಾಭಿಪ್ರಾಯ, ವಾದವಿವಾದ ಅಷ್ಟೇ ಅಲ್ಲ ಹೊಡೆದಾಟ, ಬಡಿದಾಟಗಳೂ ಸಹ ಮಾಡಿಕೊಳ್ಳುತ್ತವೆ. ಈ ಬಗೆಯ ರಾಜಕಾರಣ ಪ್ರಜಾ ತಾಂತ್ರಿಕ ರಾಷ್ಟ್ರಗಳಿಗೆ ಯೋಗ್ಯವಲ್ಲ - ಆದರೆ ಅದನ್ನು ಹೇಳುವವರಾರು ಹೇಳಿದರೂ ಕೇಳುವವರಾರು.

## ಇಡ್ಲಿ

ನಿನ್ನನ್ನು ವಿರೂಪಗೊಳಿಸಲು ಹುನ್ನಾರ ನಡೆಸಿರುವ ವಿಷಯ ನಿನಗೆ ತಿಳಿದಿದೆಯೇ? ಅಡಿಗೆ ಮಾಡುವ ಹೊಸ ಮಾದರಿಯ ಸಾಧನೆಗಳನ್ನು ತಯಾರಿಸುವ (Appliances) ಕಂಪನಿಯೊಂದು 'ಇಡ್ಲಿ' ತಯಾರಿಸುವ ಹೊಸ ಮಾದರಿಯ ಸಾಧನವನ್ನು ಮಾರುಕಟ್ಟೆಗೆ ತಂದಿರುವುದಷ್ಟೇ ಅಲ್ಲದೆ ೫೦೦ ವರ್ಷಗಳ ನಂತರ (ಬೆಳ್ಳಗೆ ಮಲ್ಲಿಗೆ ಹೂವಿನಂತೆ) ದುಂಡಗೆ ಹಬೆಯಾಡುತ್ತ ತಟ್ಟೆಯಲ್ಲಿ ಉಪಹಾರಕ್ಕಾಗಿ ಸಿದ್ಧವಾದ ಇಡ್ಲಿಗಳಿಗೆ "ಹೊಸ ರೂಪವನ್ನು ಕೊಟ್ಟಿದ್ದೇವೆ" ಎಂಬುದಾಗಿ ಪ್ರಚಾರ ಮಾಡುತ್ತಿರುವುದು ನಿಜಕ್ಕೂ ನಮಗೆ ಬೇಸರ ತಂದಿದೆ! ಹಲವು ವರುಷಗಳ ಹಿಂದೆ "ಆರತಿಗೊಬ್ಬಳು ಮಗಳು ಕೀರುತಿಗೊಬ್ಬ ಮಗ" ಸಾಕೆಂದು ಕುಟುಂಬ ಯೋಜನೆ (Family Planning) ಜಾರಿಗೆ ತಂದಾಗ ತ್ರಿಕೋಣಾಕಾರದ ಚಿಹ್ನೆ ಎಲ್ಲೆಲ್ಲೂ ಕಣ್ಣಿಗೆ ಕಾಣಿಸುತ್ತಿತ್ತು. ಪಾಪ! ಇಡ್ಲಿ ತನ್ನ ಆಕಾರ ಸ್ವರೂಪವನ್ನು ಕಳೆದುಕೊಂಡಿದ್ದೇ ಅಲ್ಲದೆ, 'ಅಂತರ್ ಜಾಲ'ದಲ್ಲಿ ಸಿಕ್ಕಿಹಾಕಿಕೊಂಡು "ಗೂಳಿ ಕೆಳಗೆ ಬಿದ್ದರೆ ಆಳಿಗೊಂದು ಕಲ್ಲು" ಎನ್ನುವಂತೆ ಒಬ್ಬೊಬ್ಬರು ಒಂದೊಂದು ಹೋಲಿಕೆ ಮಾಡಿ ಮಾತನಾಡಿ "ಇಡ್ಲಿ"ಯನ್ನು ಹೀಯ್ಯಾಳಿಸುತ್ತಿರುವುದು ನಿಜಕ್ಕೂ ಖೇದಕರ ಸಂಗತಿ!

'ಇಡ್ಲಿ'ಯ ಹಿಂದೆ ಸಾಕಷ್ಟು ಕಾಲ್ಪನಿಕ, ಕಟ್ಟು-ಕಥೆಗಳು ಹೇರಳವಾಗಿ ಹಚ್ಚಿ ಹರಡಿರುವುದು ಅಷ್ಟೇ ಸತ್ಯ! ಇಂಡೋನೇಶಿಯಾದ 'ಕೇಡ್ಲಿ' (ಹುದುಗು ಬಂದಿರುವ ಈ ತಿಂಡಿ ಅವರಿಗೆ ಬಹಳ ಪ್ರಿಯವಾದದ್ದು) 'ಇಡ್ಲಿ'ಯು ಮಾರ್ಪಾಡುಗೊಂಡ ರೂಪ ಎನ್ನಬಹುದು. ಒಮ್ಮೆ ಇಂಡೋನೇಶಿಯ ರಾಜ ತನಗಾಗಿ 'ವಧು'ವಿನ ಅನ್ವೇಷಣೆ ಮಾಡುತ್ತಾ ಭಾರತಕ್ಕೆ ಬಂದಾಗ (೮ನೆಯ ಶತಮಾನ), ರಾಜನೊಡನೆ ಬಂದ ಸಂಗಡಿಗರು, ರಾಜನ ಉಪಹಾರಕ್ಕಾಗಿ "ಕೇಡ್ಲಿ" ತಯಾರಿಸಿದಾಗ, ಭಾರತದ ಅಡಿಗೆಯವರು ತಮ್ಮ ಕಲ್ಪನೆಗನುಸಾರವಾಗಿ, 'ಇಡ್ಲಿ' ತಯಾರಿಸುವ ಕುಶಲತೆ, ನೈಪುಣ್ಯತೆ ಪಡೆದುಕೊಂಡರಂತೆ! ಶಿವಕೋಟಿ ಆಚಾರ್ಯರವರ 'ವಡ್ಡಾರಾಧನೆ' (೯೨೦ ಶ.ಕ)ಯಲ್ಲಿ, ಹೇಳುವುದೇನೆಂದರೆ ಅತಿಥಿಯಾಗಿ ಬಂದ ಬ್ರಹ್ಮಚಾರಿಗೆ ಊಟ ಬಡಿಸಿದಾಗ ಆ ಹದಿನೆಂಟು ಪಕ್ವಾನ್ನಗಳಲ್ಲಿ 'ಇಡ್ಲಿ'ಗಳು ಇರುತ್ತಿತ್ತು! 'ಕಥೆಗಳು' ಏನಾದರೂ ಇರಲಿ, ಎಷ್ಟು ಸತ್ಯ ಎಷ್ಟು ಮಿಥ್ಯ ಗೊತ್ತಿಲ್ಲ!

ಅಕ್ಕಿ, ಉದ್ದು ಮಿಶ್ರಮಾಡಿ, ನೆನೆಹಾಕಿ ಹುದುಗು ಬರಿಸಿ (Ferment) ಮರುದಿನ ಆವಿಯಲ್ಲಿ ಬೇಯಿಸಿದ ಇಡ್ಲಿ ಬೆಳಗಿನ ಉಪಹಾರಕ್ಕೆ ಹೇಳಿ ಮಾಡಿಸಿದ 'ತಿಂಡಿ' ಎಂದರೆ ತಪ್ಪಾಗಲಾರದು (ಬಿ, ಜೀವಸತ್ವಗಳು, ಸಸಾರಜನಕ ಇನ್ನಿತರ ಪೌಷ್ಟಿಕಾಂಶಗಳು ತುಂಬಿರುವ ಆಹಾರ) ಬಡವರಾಗಲೀ, ಬಲ್ಲಿದರಾಗಲೀ ಹಸಿವನ್ನು ಹಿಂಗಿಸಿ ಆರೋಗ್ಯ ಕೊಡುತ್ತದೆ. ಅನನುಭವಿಗಳ ಕೈನಲ್ಲಿ ದೋಸೆ ('ಇಡ್ಲಿ'ಯ ತಂಗಿ ಅಥವಾ ತಮ್ಮನೇ?) ಚಪಾತಿ ತನ್ನ ಆಕಾರ, ಮೃದುತ್ವ ಕಳೆದುಕೊಳ್ಳಬಹುದು. ಆದರೆ ಇಡ್ಲಿ ತನ್ನತನವನ್ನು ಈವರೆವಿಗೆ ಉಳಿಸಿಕೊಂಡಿದೆ (Identity) ಹದವಾಗಿ ಹುದುಗು ಬಂದು ಅಡಿಗೆ ಮನೆಯ ಬೆಚ್ಚನೆಯ ವಾತಾವರಣದಲ್ಲಿ ಅಡಗಿ ಕುಳಿತಿರುವ ಹಿಟ್ಟು ಹೊರಗೆ ಬಂದ ಕೂಡಲೇ ಲೋಟಕ್ಕೆ ತುಂಬಿಸಿ ತಟ್ಟೆಯಲ್ಲಿ ಹರಡಿ, ಯಾವುದೇ ಪಾತ್ರೆಯಲ್ಲಿ ಹಿಟ್ಟು ಹಾಕಿದರೂ ಸರಿ ಸ್ವಲ್ಪ ಸಮಯದಲ್ಲಿ ಹೆಚ್ಚು ಸದ್ದು-ಗದ್ದಲವಿಲ್ಲದೆ ಸರಳವಾಗಿ ಸಲೀಸಾಗಿ, ಎದ್ದು ಬಂದು, ತಟ್ಟೆಯಲ್ಲಿ ಬಿಸಿ-ಬಿಸಿ ಇಡ್ಲಿಗಳು ಸವಿಯಲು ಸಿದ್ಧವಾಗುವುದು ಎಲ್ಲರ ಅನುಭವಕ್ಕೆ ಬಂದಿರುವ ಸಂಗತಿ 'ದೋಸೆ' ಹಾಗಲ್ಲ. 'ತವ' ಬಿಸಿಯಾಗಬೇಕು. ಹಿಟ್ಟು ಹದವಾಗಿರಬೇಕು ಹಾಗಿದ್ದರೂ ಕೆಲವು ವೇಳೆ 'ತವ' ದಿಂದ ಹೊರಗೆ ತೆಗೆಯಬೇಕಾದರೆ, ಒದ್ದಾಟವಾಗುತ್ತದೆ. ಹಾಗೆ ಕಷ್ಟಪಟ್ಟು ತೆಗೆದರೂ ಸಹ ಗುಂಡಗೆ ಎದ್ದು ಒಂದು 'ದೋಸೆ' ತಟ್ಟೆಯಲ್ಲಿ ಇಡಲು ಸಾಧ್ಯವಾಗುವ ಸಂದರ್ಭ ಇಲ್ಲವೇ ಇಲ್ಲ ಎನ್ನಬಹುದು. 'ಇಡ್ಲಿ' ಎಂದೂ ಎಣ್ಣೆಯಾಗಲೀ, ಬೆಣ್ಣೆಯಾಗಲೀ ಬೇಡಿದುಂಟೇ? ಇದೇ ಬೇಕು, ಅದೇ ಬೇಕು ಎನ್ನುವ ಬೇಡಿಕೆ 'ಇಡ್ಲಿ' ಇಟ್ಟೇ ಇಲ್ಲ! ಸಾಂಬಾರು, ಸೂಪು, ಚಟ್ನಿ, ಚಟ್ನಿಪುಡಿ ಎಲ್ಲಾ ವಸ್ತುಗಳೊಡನೆಯೂ ಹೊಂದಿಕೊಂಡು ಹೋಗುವುದೇ 'ಇಡ್ಲಿ'ಗೆ ಇರುವ ಸರಳ ಸ್ವಭಾವ. ತುರ್ತು ಪರಿಸ್ಥಿತಿಗೆ ಹೊಂದಿಕೊಂಡು ಹೋಗುವುದು ಅದರ ವಿಶೇಷ ಗುಣ 'ಎಣ್ಣೆ' ಕೂಡದು ಎಂದರೆ 'ದೋಸೆ' ಮಾಡಬೇಕೆಂದರೆ, ರಾಸಾಯನಿಕಗಳ ಲೇಪನ ಮಾಡಿದ ವಿಶೇಷ 'ತವ' (ಸಾಧನ) (Non stick pan) ಬೇಕು, ಇಡ್ಲಿ'ಗೆ ಆ ರೀತಿ ವಿಶೇಷ ಸಾಧನೆ, ಸಲಕರಣೆ ಏನೂ ಬೇಕಾಗಿಲ್ಲ. ಯಾರೋ ಟ್ವಿಟರ್‌ನಲ್ಲಿ ಹೇಳಿದಂತೆ, 'ಇಡ್ಲಿ'ಯನ್ನು 'ವಿರೂಪ' ಮಾಡಿದ್ದೇ ಆದರೆ ಬರ್ಮುಡ ಟ್ರಯಂಗಲ್‌ಗಿಂತ ಅಪಾಯಕಾರಿಯಾಗಬಹುದು. ಅದೇನೇ ಇರಲಿ 'ಇಡ್ಲಿ'ಯನ್ನು ಇರುವಂತೆ ಇರಲು ಬಿಡಿ ಬದಲಾವಣೆಯನ್ನು ನಾನು ವಿರೋಧಿಸುತ್ತೇನೆ. ಆಕ್ಷೇಪಿಸುತ್ತೇನೆ, ಪ್ರತಿಭಟಿಸುತ್ತೇನೆ. ನೀವೇನು ಮಾಡುತ್ತೀರಿ?

ವನಜರಾಜನ್

### ಚುನಾವಣೆ ಶಾಯಿಕಾರ್ಖಾನೆ

ಎಲ್ಲಿದೆಯೆಂದು ನಿಮಗೆ ತಿಳಿದಿದೆಯೇ? ನಮ್ಮ 'ಸಾಂಸ್ಕೃತಿಕ ನಗರಿ' ಎಂದು ಪ್ರಖ್ಯಾತವಾಗಿರುವ ಮೈಸೂರಿನ 'ಹೆಮ್ಮೆಯ ಹೆಗ್ಗುರುತು' ಎಂದರೆ ಆಶ್ಚರ್ಯವಾಗಬಹುದು! ಇದು ನಿಜ! ಈಗಾಗಲೇ ಚುನಾವಣೆಯ 'ಬಿಸಿ' ಕರ್ನಾಟಕದ ಜನತೆಗೆ ತಾಕಿಯೂ ಆಯಿತು ಹಾಗೂ ಸ್ವಲ್ಪ ಮಟ್ಟಿಗೆ ತಣ್ಣಗೂ ಆಯಿತು. 'ಗದ್ದುಗೆ'ಗಾಗಿ ಗುದ್ದಾಟದ ನಾಟಕಕ್ಕೆ ಅಲ್ಪ ವಿರಾಮ ಈಗ ದೊರಕಿದೆ. ನಾವು ಮತ ಚಲಾಯಿಸಿ (ನಮ್ಮ ಹಕ್ಕೆಂದು!) ಅಳಿಸಲಾಗದ 'ಶಾಯಿ'ಯನ್ನು ಹೆಚ್ಚಿಸಿ ಕೊಂಡಿದ್ದೂ ಆಯಿತು.

ಇದು ಪ್ರಜಾತಂತ್ರ ವ್ಯವಸ್ಥೆಯ 'ದ್ಯೋತಕ' ಎಂದಾದ ಮೇಲೆ, ಈ ಬಗ್ಗೆ ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳ ಬೇಕಾದುದು ಅವಶ್ಯಕ ವೆಂದೆನ್ನಿಸಿತು. ತೃತಿಯ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲೂ (Third world countries) ಮತದಾನ ಮಾಡಿದ ವ್ಯಕ್ತಿಗೆ ಗುರುತಾಗಿ 'ಅಳಿಸಲಾಗದ ಶಾಯಿ' ಯನ್ನು ಬೆರಳಿಗೆ ಹಾಕುವ ಸಂಪ್ರದಾಯುವನ್ನು ಅನೂಪಾನವಾಗಿ ಪಾಲಿಸಲಾಗುತ್ತದೆ. ಅದರಲ್ಲೂ ಭಾರತದಂಥ ಬೃಹತ ರಾಷ್ಟ್ರಗಳಲ್ಲಿ ನಡೆಯುವ ಎಲ್ಲಾ ಸಾರ್ವತ್ರಿಕ ಚುನಾವಣೆಗಳಲ್ಲಿ 'ಚುಕ್ಕಿ' ಹಚ್ಚುವಿಕೆ ಪ್ರಧಾನ ಪಾತ್ರ ವಹಿಸುತ್ತಲೇ ಬಂದಿದೆ.

ಇಂದು ಮತ ಪತ್ರಗಳ ಮೇಲೆ ಮೊಹರು ಒತ್ತುವ ವಿಧಾನ ಕಣ್ಮರೆಯಾಗಿ ಮತಯಂತ್ರಗಳ 'ಗುಂಡಿ' ಒತ್ತಿ ಮತ ಚಲಾಯಿಸುವ ಹೊಸ ವಿಧಾನ ಬಂದಿದೆಯಾದರೂ 'ಅಳಿಸಲಾಗದ ಶಾಯಿ'ಗೆ ಪರ್ಯಾಯ ವಿಧಾನ ಈವರೆವಿಗೆ ಬಂದಿಲ್ಲ. ಇದು ಬಹಳ ಸರಳವೂ, ದುಬಾರಿ ಇಲ್ಲದ ಕಡಿಮೆ ಖರ್ಚಿನ ವಿಧಾನವೂ ಆಗಿದೆ. ಹಾಗಾಗಿ ಇದರ ಪಾತ್ರ ತೆರೆಮರೆಗೆ ಸರಿದಿಲ್ಲ! ಇನ್ನೊಂದು ನಾವು ಗಮನಿಸಬೇಕಾದ ವಿಷಯವೆಂದರೆ ಈ 'ಶಾಯಿ' ಯಾವುದೋ ಬೇರೆ ದೇಶ ಅಥವ ರಾಜ್ಯದಿಂದ ಆಮದಾಗಿ ಬರುವ ವಸ್ತುವಲ್ಲ. ಸಾಂಸ್ಕೃತಿಕ ನಗರಿಯಾದ ಮೈಸೂರಿನ ಕಾರ್ಖಾನೆಯೊಂದರಲ್ಲಿ ಇದು ತಯಾರುಗುತ್ತಿದೆ. ಆಶ್ಚರ್ಯದ ಸಂಗತಿ ಎಂದರೆ ಭಾರತ ಒಂದೇ ಅಲ್ಲ, ಸುಮಾರು ೧೦-೧೫ ರಾಷ್ಟ್ರಗಳ ಚುನಾವಣೆಗೆ ಈ ಪುಟ್ಟ ಕಾರ್ಖಾನೆಯ ಶಾಯಿಯೇ ಬೇಕು. ಬಲವಾಗಿ ತಿಕ್ಕಿದರೂ, ಒರಸಿದರೂ, ಅಳಿಸಿ ಹೋಗದ ಈ ಶಾಯಿಗೆ ಬಲುಬೇಡಿಕೆ ಇದೆ.

### Haldi kumkum

On the occasion of Shravan, Haldi Kumkum is being organised at our Kannada Sangha hall on 27th August, 2016 at 4 PM. Also there is talk on "Nutrition and physiotherapy" from Wockhardt hospital. All the ladies are requested to attend in large numbers. The talk is sponsored by Lions Club.

## ಕೃಷ್ಣ ವೇಷ ಸ್ಪರ್ಧೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ

ಕಳೆದ ಹದಿಮೂರು ವರ್ಷಗಳಿಂದ ಸಾಹಿತ್ಯ ಬಳಗ, ಮುಂಬಯಿ ಆಶ್ರಯದಲ್ಲಿ ನವಿ ಮುಂಬಯಿ ಕನ್ನಡ ಸಂಘ ಮತ್ತು ಇತರ ಸಂಸ್ಥೆಗಳ ಸಹಯೋಗದಿಂದ ಕೃಷ್ಣ ವೇಷ ಸ್ಪರ್ಧೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಾಹಿತ್ಯ ಬಳಗವು ಆಚರಿಸುತ್ತ ಬಂದಿದೆ. ಈ ವರ್ಷದ ಕಾರ್ಯಕ್ರಮವು ದಿನಾಂಕ ೨೧-೮-೨೦೧೬ ರವಿವಾರ ಅಪರಾಹ್ನ ಗಂಟೆ ೨.೩೦ ರಿಂದ ೮.೦೦ ರತನಕ ನಮ್ಮ ಸಂಘದ ಸಭಾಂಗಣದಲ್ಲಿ ನಡೆಯಲಿದೆ.

### ಮುಖ್ಯ ಕಾರ್ಯಕ್ರಮ

ಶ್ರೀ ಕೃಷ್ಣ ವೇಷ ಸ್ಪರ್ಧೆ : ಮುದ್ದು ಕೃಷ್ಣ - ನಾಲ್ಕು ವರ್ಷದವರೇಗೆ
ಬಾಲ ಕೃಷ್ಣ - ನಾಲ್ಕರಿಂದ ಆರು ವರ್ಷ

### ಸಾಂಸ್ಕೃತಿಕ ಕಾರ್ಯಕ್ರಮ

ವಿವಿಧ ದಾರ್ಶವೀಶರು ಕಂಡ ಶ್ರೀ ಕೃಷ್ಣ - ಹಾಡುಗಳು, ಕೊಲಾಟ ಮತ್ತು ಭರತನಾಟ್ಯ

ಭಾಗವಹಿಸುವವರು : ಸಹನಾ ಭಾರದ್ವಾಜ ಮತ್ತು ಸಂಗಡಿಗರು ಹಾಗೂ ಶಿವಾನಂದರ ಸಂಗೀತ

ಉಪನ್ಯಾಸ : ಇಸ್ಕಾನ್‌ನ ಗೋವಿಂದ ಪ್ರಭು ಇವರಿಂದ ವಿಶೇಷ 'ಕೃಷ್ಣಂ ವಂದೇ ಜಗದ್ಗುರು' ಇಂಗ್ಲಿಷನಲ್ಲಿ ಉಪನ್ಯಾಸ

ರಾತ್ರಿ ಪ್ರೀತಿ ಭೋಜನ ಮತ್ತು ಉಪಹಾರ ವ್ಯವಸ್ಥೆ ಮಾಡಲಾಗಿದೆ.

ಹೆಚ್ಚಿನ ವಿವರಗಳಿಗೆ ಹಾಗೂ ಸ್ಪರ್ದೆಯಲ್ಲಿ ಭಾಗವಹಿಸಲು ಸಂಪರ್ಕಿಸಿ ನವಿ ಮುಂಬಯಿ ಕನ್ನಡ ಸಂಘ, ವಾಶಿ- ೨೭೬೫೩೪೪೩ಅಥವ ಶ್ರೀ ಎಚ್ ಬಿ ಎಲ್ ರಾವ್ - ೯೮೬೯೫೩೩೧೨೩

### ಉಪಾಕರ್ಮ

ದಿನಾಂಕ ೨೧.೮.೨೦೧೬ ರಂದು ಪೂರ್ವಾಹ್ನ ಗಂಟೆ ೭.೦೦ಕ್ಕೆ ಸರಿಯಾಗಿ ವೇದಮೂರ್ತಿ ಶ್ರೀ ದುರ್ಗಾಪ್ರಸಾದರ ಪೌರೋಹಿತ್ಯದಲ್ಲಿ 'ಉಪಾಕರ್ಮವು' ನಡೆಯಲಿದೆ. ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಆಸಕ್ತರು ಭಾಗವಹಿಸಬೇಕಾಗಿ ವಿನಂತಿ.

## ಕನ್ನಡ ಎನೆ ಕಿವಿ ನಿಮಿರುವುದು

ಜೀವನದ ಪಯಣದಲ್ಲಿ ದಿನನಿತ್ಯವೂ ಹಲವಾರು ಜನಗಳನ್ನು ಸಂಧಿಸುತ್ತೇವೆ, ಮಾತು - ಕತೆಯಾಡುತ್ತೇವೆ, ಹಲವಾರು ಸಂಧರ್ಭಗಳನ್ನು ಮೆಲುಕು ಹಾಕುತ್ತೇವೆ.

ಹೀಗೊಮ್ಮೆ ನಾನು, ನನ್ನ ಸೊಸೆ ಹಾಗೂ ಮೊಮ್ಮಗಳು ಆಟೋರಿಕ್ಷಾದಲ್ಲಿ ಪಯಣಿಸುತ್ತಿದ್ದೆವು. ನಮ್ಮ ಮಾತೃ ಭಾಷೆಯಾದ ಕನ್ನಡದಲ್ಲಿ ಮಾತನಾಡುತ್ತಿದ್ದೆವು. ಚಾಲಕನಿಗೆ ಕೇಳಿಸಿ ತಕ್ಷಣ ಹಿಂತಿರುಗಿ 'ನೀವು ಕನ್ನಡದಲ್ಲಿ ಮಾತನಾಡುತ್ತಿರುವರಲ್ಲವೆ?' ಎಂದ. ಅವನ ಮುಖದಲ್ಲಿ ಒಂದು ಬಗೆಯ ಸಂತಸ ಹಾಗು ಅಚ್ಚರಿ ಎದ್ದುಕಾಣುತ್ತಿತ್ತು. ಎಷ್ಟೋ ಜನಕ್ಕೆ ದಕ್ಷಿಣ ಭಾರತದ ಎಲ್ಲಾ ಭಾಷೆಯೂ ಒಂದೇ 'ನಾವು ಹಾಂ! ನಮ್ಮ ಮಾತೃಭಾಷೆ ಕನ್ನಡ - ಕರ್ನಾಟಕದವರು, ಮಕ್ಕಳು ತಾಯ್ನುನುಡಿಯನ್ನು ಮರೆಯಬಾರದಲ್ಲ, ಎಲ್ಲಿದ್ದರೂ ನಮ್ಮ ಭಾಷೆಯಲ್ಲೇ ಮಾತನಾಡುತ್ತೇವೆ' ಎಂದಳು ಸೊಸೆ.

ಬಹಳ ಸಂತೋಷ, ನನ್ನ ತಾಯಿ ಕರ್ನಾಟಕದವಳು, ಕನ್ನಡಿತಿ, ತಂದೆ ಮರಾಠಿ, ಮಹಾರಾಷ್ಟ್ರದಲ್ಲಿದ್ದು ಮರಾಠಿ ಕಲಿತೆವು. ನಾವು ಕನ್ನಡ ಕಲಿಯಲೇ ಇಲ್ಲ, ನನ್ನ ತಾಯಿಗೆ ತನ್ನ ಭಾಷೆಯ ಬಗ್ಗೆ ಬಹಳ ಹೆಮ್ಮೆ. ಯಾವಾಗಲು ಕನ್ನಡ ಹಾಡುಗಳನ್ನು ಗುನುಗುತ್ತಿದ್ದಳು. ಆ ಸುಂದರ ಭಾಷೆಯನ್ನು ಕಲಿಯಲಿಲ್ಲವಲ್ಲಾ ಎಂಬ ನೊವು ಇಂದಿಗೂ ಇದೆ. ಅದಕ್ಕೆ ನನ್ನ ಪುಟ್ಟ ಇಬ್ಬರು ಮಕ್ಕಳಿಗಾದರೂ ಕಲಿಸಬೇಕೆಂಬ ಆಶೆಯ. ಯಾರಾದರು ಕನ್ನಡ ಕಲಿಸುವವರಿದ್ದಾರೆಯೆ? ಎಂದ ಆಟೋ ಚಾಲಕ. ನಾನು 'ನಮ್ಮ ಕನ್ನಡ ಸಂಘದಲ್ಲಿ ಕಲಿಸುತ್ತಾರೆ' ಎಂದೆ ಖುಷಿಯಿಂದ. ತುಂಬ ಸಂತೊಷದಿಂದ ದನ್ಯವಾದಗಳನ್ನು ತಿಳಿಸಿದ.

ಹೀಗೊಮ್ಮೆ - ಯುಗಾದಿಯ ಸಮಯ. ಮಾವು-ಬೇವು-ಹೂ ತರಲು ವಾಶಿ ಮಾರುಕಟ್ಟೆಗೆ ಹೋಗಿದ್ದೆವು. ವಿಪರೀತ ಜನ-ಜಂಗುಳಿ, ಸೂರ್ಯಸ್ತಮ ವಾಗಿದ್ದರೂ, ಇನ್ನು ಸೆಖೆ, ಬಿಸಿಲ ಝಳ, ಬಾಯಾರಿದ ನಾನು ನನ್ನವರಲ್ಲಿ ನೀರಿನ ಬಾಟಲಿ ಕೇಳಿದೆ. ನಂತರ ಕನ್ನಡದಲ್ಲಿ ಮಾತಾಡಿಕೊಳ್ಳುತ್ತಿದ್ದೆವು. ಅಲ್ಲೇ ಇದ್ದ ಎಂಟು-ಹತ್ತು ವರ್ಷದ ಮುದ್ದಾದ ಹುಡುಗಿ ನಮ್ಮ ಕಡೆ ನೋಡಿ ಮಗಳ್ನಕ್ಕು 'ಅಮ್ಮ, ನೋಡಮ್ಮ ಇವರೂ ನಮ್ಮ ಕನ್ನಡದವರು' ಎಂದು ತನ್ನ ತಾಯಿಯನ್ನು ಪರಿಚಯಿಸಿದಳು. ಅವಳ ಕಣ್ಣಿನಲ್ಲಿ ಖುಷಿ ಮಿಂಚುತಿತ್ತು. ತಾಯಿ ನುಡಿದರು 'ಮಕ್ಕಳು ಮಾತೃಭಾಷೆ ಮರೆತಾರೆಂದು ಮನೆಯಲ್ಲಿ ಕನ್ನಡದಲ್ಲೇ ಮಾತನಾಡುತ್ತೇವೆ, ಅವಳಿಗೆ ಬಹಳ ಭಾಷಾ ಪ್ರೀತಿ', ನನಗೆ ಬಹಳ ಸಂತೋಷವಾಯಿತು. ಮಗುವಿಗೆ ಪೀತಿಯ ಮುತ್ತನ್ನಿತ್ತೆ. ಇಂದಿಗೂ ಆ ಮಗುವಿನ ಕಣ್ಣಮಿಂಚು ನನ್ನ ಅಂತರಾಳದಲ್ಲಿ ಹುದುಗಿದೆ.

ಶ್ರೀಮತಿ ರತ್ನಾ ಶಾಸ್ತ್ರಿ

### ANNUAL GENERAL BODY MEETING

The 38th Annual General Body Meeting of our Sangha will be held on Sunday 28th August, 2016 at 5 PM in our Sangha premises. All the members are requested to attend the same.

### CERTIFICATE COURSE IN KANNADA

The University of Mumbai, Department of Kannada offers Certificate course in Kannada for which the classes will commence from Saturday, 20th August 2016. Applications need to be submitted on or before 14th August, 2016. For further details contact Navi Mumbai Kannada Sangha on 27653443 or Mr. Patki on 9403332933

### MARATHI CLASSES

Marathi classes will start from the first week of September, 2016 at our Sangha premises. Interested candidates can contact Sangha office on 27653443 for further details.


**ARE YOU SUFFERING LONG STANDING PAINS ???**

Pain Relief - NOW WITHIN YOUR REACH ...

Relief for Pains in BACK, NECK, SHOULDER, KNEE ETC...; HEADACHES;CANCER PAINS;POST-SURGICAL PAINS Pain relief through Interventions, Dry Needling & Medications

**Consult with DR. RENUKA PAI (Pain Specialist) on Thursdays & Saturdays (12.30 to 2.30 PM) @ Vinamra Swaraj Hospital, Sector 12, Vashi**

**Contact 27895555 (Ext. No 9) (9 Am to 7 PM)**

"Get quality care at our multi-specialty hospital"

Call for OPD appointments

**022-66804400**

**Wockhardt Hospitals Ltd**

On Sion-Panvel Expressway, Sector - 7 ,Vashi , Navi Mumbai – 400703

**MBA, MCA, BBA**

From International School of Professional Studies I.S.P.S. has built foundation on a wide base of knowledge which includes the elements of professional, subjective, practical, spiritual base. We have that in competitive & fast changing environment, it is time of complete knowledge and efficiency. This programme shall train the students into becoming decision makers with social sensitivity and a broad strategic vision

**Contact: 93200 23450 or naik@ plutous.in**

**SRI BALAJI SWEETS**

(ಮಂಗಳೂರು ಸ್ಟೋರ್ಸ್)

- Carrot Mysurpa
- Boondi Laddu
- Badusah
- Ghee Mysurpa
- Home Products
- Savouries

*Udupi Mangalore Home Products And Sweets Available*

**Shop No.B2/4/12, Gr.Flr., Opp. Shabari Hotel, Sec-16, Vashi, Navi Mumbai-400705. Contact:- +91 9773916315**

**RATNA CHANDRAN PLACEMENT**

We provide following personalised services

***Patient's Care * Governess *Child Care * House Keeping***

***Senior Citizens' Care * Many more such services***

***For All Your Needs Please Contact:-***

**Mob. 96190 56759 / 97692 44048**

**Available**
**5 room and 3 room bungallows in Vashi and KoparKhairane for accomodation of wedding guests**

**Contact 9321014935 & 9322234228**

**SHREE GURU RAGHAVENDRA CATERING SERVICES**

We undertake **Pure Vegetarian Catering** including Home Delivery Tiffin Services, and arranging **Religious Functions** (Ganapati Havan, Satyanarayan Pooja, Graha Shanti & other types of havans) and preparing **Computerized Horoscope** in English,Hindi and Kannada

FOR DETAILS CONTACT:

**MR.UDAY BHAT: 9324 903594 / 80801 55775 /99307 18495**

**Email : uday.bht@gmail.com**

Add.: Reshma Corner, Plot No. D-10, Room No. 304, Sector - 5, Koparkhairane, Navi Mumbai - 400709 (Behind Municipal School) or Room No.T - 187, Sector - 4, Airoli, Navi Mumbai - 400708 RH-34, Nr. Tilak School, Sector-5,Ghansoli, Navi Mumbai-400701

VASTU IS SCIENCE

**Uday Suvarna**

*Dip. Interior Design from L.S.Raheja*

***Vastu Consultancy For Residential & Commercial Premises***

**Megha Mattress Centre**

For Cotton, Foam, MM Foam and Coir Mattress, Sleepwell Mattress, Pillows, Cushions, Bolsters, Curtains, Sofa Covers, Making and Repairing of Sofas

Service Unit No. 8, Sector 6, Vashi, Navi Mumbai - 400 703.
Contact: 9820676412 / 98199 82971/ 27827471

**Shree Mahalasa Krupa**
**(Udupi Home Products)**

ನಮ್ಮಲ್ಲಿ ತೆಂಗಿನೆಣ್ಣೆ, ದೀಪದ ಎಣ್ಣೆ, ಮೆಣಸಿನ ಹಪ್ಪಳ, ಉದ್ದಿನ ಹಪ್ಪಳ, ಬಟಾಟಿ ಹಪ್ಪಳ, ಸಂಡಿಗೆ, ಸಾಂಬಾರ, ಸಾರಿನ ಪುಡಿ, ಕಷಾಯ, ಆಪ್ಪಿಮಿಡಿ, ಮಾವಿನ ಕಾಯಿ, ತುಂಡು ಮಾವಿನಕಾಯಿ, ಮಿಕ್ಸ ಉಪ್ಪಿನಕಾಯಿ, ಲಕ್ಷ್ಮಿ ಕಾಫಿ, ಪುಳಿಯೋಗರೆ, ಬೀಸಿ ಬೇಳೆ ಬಾತ್, ಅಕ್ಕಿ ರೊಟ್ಟಿ ಮತ್ತು ಉಳಿದ ವಸ್ತುಗಳು ದೊರೆಯುತ್ತದೆ.

Address-Shop No.0-10, Mini Market-1,Sec.10, Behind Trimurthi Hotel, Vashi, Navi Mumbai 400703.
Contact:M.V. Nayak 8898989597.

**Dinesha Chadaga A**

Purohit & Jyothish

NL 5,Bld. No.17, Flat No.7, Sector-11, Hill View Apartments, Nr.Surya Hospital, Nerul, Navi Mumbai-400706. Tel.27721747 (M) 9869501747

**ಗಣಹೋಮ, ಸತ್ಯನಾರಾಯಣಪೂಜೆ, ಗೃಹಪ್ರವೇಶ, ವಾಸ್ತುಶಾಂತಿ, ಇನ್ನಿತರ ಎಲ್ಲಾ ಧಾರ್ಮಿಕ ವೈದಿಕ ಕರ್ಮಾಂಗಗಳನ್ನು ಸುವ್ಯವಸ್ಥಿತವಾಗಿ ಮಾಡಿಕೊಡಲಾಗುವುದು. ಜಾತಕ ಹಾಗೂ ಜ್ಯೋತಿಷ್ಯ ಚಿಂತನೆ ಮಾಡಲಾಗುವದು. ಅಲ್ಲದೆ ಇನ್ನಿತರ ಯಾವುದೇ ಪೂಜೆ, ಶಾಂತಿ ಹೋಮಗಳನ್ನು ಮಾಡಿಕೋಡಲಾಗುವದು.**

**PRINTED AND PUBLISHED BY**
Shri. Y.K.RAO on behalf of
**NAVI MUMBAI KANNADA SANGHA**
Plot No. 2C/2, Sector 9A, Vashi, Navi Mumbai - 400703.
Tel.:**2765 3443 web: www.navimumbaikannadasangha.com**
**EDITOR : SHRI B. H. KATTI**

***Subscription Rates :***
***Yearly-Rs.20/-, Single Copy-Rs.2/-***

REG. NO.NMB /27 /2015-17
Posted at Vashi MDG P.O. on 20th of every month

Printed at PIONEER ENTERPRISES, Shop F-3, Sector-5, Vashi, Navi Mumbai.